# ಮೈಸೂರು ವಿಶ್ವವಿದ್ಯಾನಿಲಯ

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570 005,

ಸಂಖ್ಯೆ: ಪ.ವಿ. ಆರ್.ವಿ/2020-21
ದೂರವಾಣಿ ಸಂಖ್ಯೆ : 0821-2419212

ದಿನಾಂಕ: 04-12-2021

## ಪ್ರಕಟಣೆ

ನವೆಂಬರ್-2021ರಲ್ಲಿ ನಡೆದ ಪದವಿ ಪರೀಕ್ಷೆಗಳ (ಮೇಕಪ್) ಫಲಿತಾಂಶಗಳನ್ನು ಪ್ರಕಟಿಸಲಾಗಿದ್ದು, ಈ ಸಂಬಂಧ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಮರುಮೌಲ್ಯಮಾಪನ/ಉತ್ತರ ಪತ್ರಿಕೆಯ ನಕಲು ಪ್ರತಿ/ಉತ್ತರ ಪತ್ರಿಕೆ ವೀಕ್ಷಣೆ/ಮರುಸಂಕಲನದ ಬಗ್ಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಿದೆ.

| ಕ್ರಮ ಸಂಖ್ಯೆ | ವಿವರ | ದಿನಾಂಕ |
|---|---|---|
| 1. | ಮರುಮೌಲ್ಯಮಾಪನ/ಉತ್ತರ ಪತ್ರಿಕೆಯ ನಕಲು ಪ್ರತಿ/ಉತ್ತರ ಪತ್ರಿಕೆ ವೀಕ್ಷಣೆ/ ಮರುಸಂಕಲನದ ಬಗ್ಗೆ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಶುಲ್ಕ ಪಾವತಿಮಾಡಿ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: | 10-12-2021 |
| ಉತ್ತರ ಪತ್ರಿಕೆಗಳನ್ನು ವೀಕ್ಷಿಸಲು ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ದಿನಾಂಕ | | |
| 1. | ಬಿ.ಎ. | 14-12-2021 |
| 2. | ಬಿ.ಎಸ್ಸಿ. | 15-12-2021 |
| 3. | ಬಿ.ಕಾಂ. | 16-12-2021 |
| 4. | ಬಿ.ಬಿ.ಎಂ/ಬಿ.ಬಿ.ಎ. | 17-12-2021 |
| 5. | ಬಿ.ಸಿ.ಎ. ಹಾಗೂ ಇತರೆ ಪದವಿಗಳು | 18-12-2021 |
| ಮರುಮೌಲ್ಯಮಾಪನ ಶುಲ್ಕ ವಿವರ (ಪ್ರತಿ ಪತ್ರಿಕೆಗೆ) | | |
| 1. | ಪ್ರೊಫೆಷನಲ್/ನಾನ್ ಪ್ರೊಫೆಷನಲ್ ಕೋರ್ಸ್‌ಗಳಿಗೆ | ರೂ. 1200-00 |
| ಉತ್ತರ ಪತ್ರಿಕೆ ನೋಡುವಿಕೆ/ಮರು ಸಂಕಲನಕ್ಕೆ (ಪ್ರತಿ ಪತ್ರಿಕೆಗೆ) | | |
| 1. | ನಾನ್ ಪ್ರೊಫೆಷನಲ್ ಕೋರ್ಸ್‌ಗಳಿಗೆ | ರೂ. 400-00 |
| 2. | ಪ್ರೊಫೆಷನಲ್ ಕೋರ್ಸ್‌ಗಳಿಗೆ | ರೂ. 550-00 |
| 3. | ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಗೆ (ಪ್ರತಿ ಪತ್ರಿಕೆಗೆ) | ರೂ. 730-00 |

**ಮೈಸೂರು ವಿಶ್ವವಿದ್ಯಾನಿಲಯದ website www.uni-mysore.ac.in ನಲ್ಲಿ ವಿದ್ಯಾರ್ಥಿಗಳಿಗೆ ಮರುಮೌಲ್ಯಮಾಪನ/ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿ/ ಉತ್ತರ ಪತ್ರಿಕೆಗಳ ಮರುಸಂಕಲನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.**

**ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಕಲ್ಪಿಸಿರುವ ವೆಬ್‌ಸೈಟ್ ಲಿಂಕ್ (Post Result Service) ನಲ್ಲಿ ವಿದ್ಯಾರ್ಥಿಗಳು ನೊಂದಣಿ ಸಂಖ್ಯೆ ಹಾಗೂ ಜನ್ಮ ದಿನಾಂಕವನ್ನು ನಮೂದಿಸಿ ಲಾಗ್‌ಇನ್ ಆದರೆ ವಿದ್ಯಾರ್ಥಿಯ ಪರೀಕ್ಷಾ ವಿವರಗಳು ದೊರೆಯುತ್ತವೆ. ನಂತರ ಯಾವ ಸೆಮಿಸ್ಟರಿನ ಯಾವ ವಿಷಯಕ್ಕೆ/ವಿಷಯಗಳಿಗೆ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿ/ಮರುಮೌಲ್ಯಮಾಪನ/ಮರುಸಂಕಲನಕ್ಕೆ ಬೇಕಾಗಿದೆ ಎಂದು ಗುರುತಿಸಬೇಕು ಹಾಗೂ ನಿಗಧಿತ ಶುಲ್ಕವನ್ನು Atom ಪೇಮಂಟ್ ಲಿಂಕ್ ಮುಖಾಂತರ ಡೆಬಿಟ್/ಕ್ರೆಡಿಟ್ ಕಾರ್ಡ್ ಅಥವಾ ನೆಟ್ ಬ್ಯಾಂಕಿಂಗ್ ಮುಖಾಂತರ ಪಾವತಿಸಿದ ನಂತರ ಇದರ ಮುದ್ರಿತ ಒಂದು ಪ್ರತಿಯನ್ನು ವ್ಯಾಸಂಗ ಮಾಡಿದ ಕಾಲೇಜಿಗೆ ನೀಡಿ ಸ್ವೀಕೃತಿ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821-2419407/416 ಅನ್ನು ಸಂಪರ್ಕಿಸುವುದು.**

ಸೂಚನೆ:

1. ಉತ್ತರ ಪತ್ರಿಕೆಗಳನ್ನು ವೀಕ್ಷಿಸಿದ ದಿನಾಂಕದಿಂದ 3 ದಿವಸಗಳ ಒಳಗಾಗಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
2. ಮರುಮೌಲ್ಯಮಾಪನ ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕಾಗಿ ವಿಸ್ತರಿಸಲಾಗುವುದಿಲ್ಲ.

ಪು.ತಿ.ನೋ

3. ವೆಬ್‌ಸೈಟ್‌ನಲ್ಲಿ ಫಲಿತಾಂಶ ಪ್ರಕಟಗೊಂಡ 15 ದಿನಗಳೊಳಗೆ ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ನಕಲು ಪ್ರತಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
4. ಉತ್ತರ ಪತ್ರಿಕೆಯ ನಕಲು ಪ್ರತಿಯನ್ನು ವಿದ್ಯಾರ್ಥಿಯ e-mail ವಿಳಾಸಕ್ಕೆ ಕಳುಹಿಸಿಕೊಡಲಾಗುವುದು.
5. ಉತ್ತರ ಪತ್ರಿಕೆಗಳ ನಕಲು ಪ್ರತಿಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಮೇಲೆ ಸೂಚಿಸಿರುವ ದಿನಾಂಕದೊಳಗೆ ಆನ್‌ಲೈನ್ ಮುಖಾಂತರ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಮಾತ್ರ ಮರುಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.
6. ಈ ಸಂಬಂಧ ವಿಶ್ವವಿದ್ಯಾನಿಲಯದ **website** ನಲ್ಲಿ ಲಭ್ಯವಿರುವ ವಿದ್ಯಾರ್ಥಿ ಮಾರ್ಗದರ್ಶಿಯಲ್ಲಿ ತಿಳಿಸಿರುವ ಸೂಚನೆಗಳನ್ನು ಓದಿಕೊಳ್ಳುವುದು.

Cenana 4/12/21

**ಕುಲಸಚಿವ (ಪರೀಕ್ಷಾಂಗ)**

ಗೆ,

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಅವಗಾಹನೆಗಾಗಿ ಹಾಗೂ ಪ್ರಕಟಣೆಗಾಗಿ.

ಪ್ರತಿ,

1. ಪರೀಕ್ಷಾ ವಿಭಾಗದ ಎಲ್ಲಾ ಅಧಿಕಾರಿಗಳು/ಅಧೀಕ್ಷಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಕುಲಪತಿಗಳು/ಕುಲಸಚಿವರು/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು ರವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ವಿಶೇಷ ಅಧಿಕಾರಿ, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ. ಮೈ.ವಿ.ವಿ, ಮೈಸೂರು.
5. ವ್ಯವಸ್ಥಾಪಕರು, Meta-I Technologies Pvt. Ltd. ಪರೀಕ್ಷಾ ಭವನ. ಮೈ.ವಿ.ವಿ, ಮೈಸೂರು.
6. ಕಛೇರಿ ಪ್ರತಿ